**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :31 ಸಿಡಬ್ಲು :36

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಮಹಾಂತೇಶ ಗೊಳಸಂಗಿ |
| ತಂದೆಯ ಹೆಸರು | : | ಶ್ರೀ.ಬಾಪುರಾವ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 16-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

2017 ರಿಂದ 2022 ರವರೆಗೆ ನಾನು ಮುಗಳಖೋಡ ಪುರಸಭೆಯ ಸದಸ್ಯನಾಗಿದ್ದೇನು ಮತ್ತು 2017 ರಿಂದ ಎರಡೂವರೆ ವರ್ಷಗಳವರೆಗೆ ನಾನು ಮುಗಳಖೋಡ ಪುರಸಭೆಯ ಅಧ್ಯಕ್ಷನಾಗಿದ್ದೇನು.

2. ಚಾಸಾಃ 44 ಕಾಶಿಲಿಂಗ ಕಿಲಾರೆ ಅವರು ಮುಖ್ಯಾಧಿಕಾರಿಯಾಗಿ ಕಂಕಣವಾಡಿ ಪಟ್ಟಣ ಪಂಚಾಯತಿಯಲ್ಲಿದ್ದು, ಮುಗಳಖೋಡ ಪುರಸಭೆಗೆ ಪ್ರಭಾರಿಯಾಗಿ ಬರುತ್ತಿದ್ದರು. ಚಾಸಾಃ35 ಸತ್ಯನಾರಾಯಣರಾವ್ ಅವರು ಆ ನಂತರದಲ್ಲಿ ಮುಖ್ಯ ಆಡಳಿತ ಅಧಿಕಾರಿಯಾಗಿ ನೇಮಕಗೊಂಡರು. ಮುಗಳಖೋಡ ಗ್ರಾಮದ ಯಲ್ಲಮ್ಮದೇವಿ ಪಾದುಕಟ್ಟೆ ಹತ್ತಿರ ಇರುವ ಖುಲ್ಲಾ ಜಾಗದ ವಿಚಾರವಾಗಿ ಏನು ತಕರಾರು ಇತ್ತು ಎಂದು

ನನಗೆ ಗೊತ್ತಿಲ್ಲ, ಆದರೆ ಆ ಖುಲ್ಲಾ ಜಾಗ ನಮಗೆ ಸೇರಬೇಕು ಎಂದು ಮಾದರ ಸಮಾಜದವರು ಮತ್ತು ಜೈನ ಸಮಾಜದವರು ತಕರಾರು ಮಾಡುತ್ತಿದ್ದರು. ಈ ತಕರಾರು ನಾನು ಪುರಸಭೆ ಅಧ್ಯಕ್ಷನಾಗಿದ್ದಾಗ ನನ್ನ ಗಮನದಲ್ಲಿ ಇರಲಿಲ್ಲ.

3. 2018 ನೇ ಇಸವಿಯಲ್ಲಿ ನನಗೆ ದಿನಾಂಕ ನೆನಪಿರುವುದಿಲ್ಲ, ಚಾಸಾಃ 35 ರವರು ನನಗೆ ಫೋನ ಮಾಡಿ ಬಾಬನ್ನ ಅವರಿಗೂ, ಮಾದರ ಸಮಾಜದವರಿಗೂ ಗಲಾಟೆ ಆಗುತ್ತಿದೆ ನೀವು ಮುನ್ಸಿಪಾಲ್ಟಿಗೆ ಬನ್ನಿ ಎಂದು ಬೆಳಗ್ಗೆ 10:30 ಗಂಟೆಗೆ ಕರೆದರು. ನಾನು ಸುಮಾರು 10-20 ನಿಮಿಷಗಳ ನಂತರದಲ್ಲಿ ನಾನು ಕಚೇರಿಗೆ ಹೋಗಿದ್ದೇನು. ಆಗ ಅವರು ಜಗಳದ ಬಗ್ಗೆ ನನಗೆ ವಿಚಾರಿಸಿದರು, ನನಗೆ ಗೊತ್ತಿಲ್ಲ ಎಂದು ಹೇಳಿ ಕಚೇರಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ತೆಗೆದುಕೊಂಡು ಹೋಗಿ ಎಂದು ಹೇಳಿದ್ದೇನು. ನಾನು, ಚಾಸಾಃ 35, ಚಾಸಾಃ 37 ಯಮನಪ್ಪ ದೇವನ್ನವರ, ಚಾಸಾಃ 38 ಲಕ್ಷ್ಮೇಶ್ವರ ರವರು ವಿವಾದಿತ ಸ್ಥಳಕ್ಕೆ ಬೆಳಗ್ಗೆ 11:30 ಕ್ಕೆ ಹೋಗಿದ್ದೇವು. ಚಾಸಾಃ 35 ರವರು ಕಚೇರಿಯಲ್ಲಿನ ದಾಖಲೆಗಳನ್ನು ಎರಡೂ ಸಮಾಜದವರಿಗೆ ತೋರಿಸುತ್ತಿದ್ದರು, ಅಷ್ಟರಲ್ಲಿ ಎರಡೂ ಸಮಾಜದವರಿಗೆ ಗಲಾಟೆ ಆಯಿತು. ವಿವಾದಿತ ಸ್ಥಳದ ಸರ್ವೇ ನಂಬರ ನನಗೆ ಗೊತ್ತಿರುವುದಿಲ್ಲ.

4. ವಿವಾದಿತ ಸ್ಥಳವು ಗ್ರಾಮಠಾಣಾಗೆ ಸೇರಿದ್ದು ಎಂದು ತಹಶೀಲ್ದಾರವರು ಹೇಳಿದರು. ನಾವು ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳದಲ್ಲಿ ಆರೋಪಿತರು ಕಟ್ಟಡ ಕಟ್ಟುವ ಕೆಲಸ ಪ್ರಾರಂಭಿಸಿದ್ದರು. ಚಾಸಾಃ 44 ಕಾಶಿಲಿಂಗ ಕಿಲಾರೆ ಅವರು ಆರೋಪಿತರಿಗೆ ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟಲು ಅನುಮತಿ ನೀಡಿದ್ದರು ಎಂದು ನನಗೆ ತಿಳಿದಿರುತ್ತದೆ. ಆ ರೀತಿ ಅನುಮತಿ ನೀಡಿದ 4-5 ದಿನಗಳ ನಂತರ ಅನುಮತಿಯನ್ನು ರದ್ದು ಮಾಡಿರುತ್ತಾರೆ ಎಂದು ತಿಳಿದಿರುತ್ತದೆ. ಘಟನೆಯ ಬಗ್ಗೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮಧ್ಯಾಹ್ನ ಅವಧಿಗೆ ಪ್ರಕರಣವನ್ನು ಮುಂದೂಡಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜೆ. ವಕೀಲರಿಂದ**

ನಾನು 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. 2017 ರಲ್ಲಿ ಮುಗಳಖೋಡ ಪುರಸಭೆಯಲ್ಲಿ 23 ಚುನಾಯಿತ ಹಾಗೂ 5 ನಾಮನಿರ್ದೇಶಿತ ಒಟ್ಟು 28 ಜನ ಸದಸ್ಯರಿದ್ದರು. 2017 ರಲ್ಲಿ ವಡೆಯರ ಎನ್ನುವವರು ಮುಖ್ಯಾಧಿಕಾರಿಯಾಗಿದ್ದರು. 2017 ರಲ್ಲಿ ಅಂದರೆ ಈ ಪ್ರಕರಣದ ಆಗುವ ಸಮಯದಲ್ಲಿ ಸತ್ಯನಾರಾಯಣರಾವ ಅವರು ಮುಖ್ಯಾಧಿಕಾರಿಯಾಗಿದ್ದರು. ನಾನು ಪುರಸಭೆಯ ಅಧ್ಯಕ್ಷನಾಗಿದ್ದಾಗ ಮಾಸಿಕ ಸಭೆ ಮಾಡುತ್ತಿದ್ದೇನು. ಮಾಸಿಕ ಸಭೆಯಲ್ಲಿ 6 ತಿಂಗಳಿನಲ್ಲಿ ಸಾರ್ವಜನಿಕರು ಸಲ್ಲಿಸಿದಂತಹ ಅರ್ಜಿಗಳನ್ನು ಇತ್ಯರ್ಥ ಮಾಡುವ ಬಗ್ಗೆ ಮತ್ತು ಅಭಿವೃದ್ಧಿ ಯೋಜನೆಗಳು, ಕೆಲಸಗಳ ಬಗ್ಗೆ ತೀರ್ಮಾನ ಕೈಗೊಂಡು ಆ ಬಗ್ಗೆ ಠರಾವು ಪುಸ್ತಕದಲ್ಲಿ ನಮೂದು ಮಾಡುತ್ತೇವೆ ಎನ್ನುವುದು ಸರಿ. ಠರಾವು ಪುಸ್ತಕದಲ್ಲಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರುಗಳ ಸಹಿಯನ್ನು ಸಹ ಪಡೆದುಕೊಳ್ಳಲಾಗುತ್ತದೆ ಎನ್ನುವುದು ಸರಿ.

2. ಸಭೆಯಲ್ಲಿ, ಗ್ರಾಮದಲ್ಲಿ ಗ್ರಾಮಸ್ಥರು ಕಟ್ಟಡ ಕಟ್ಟುವ ಬಗ್ಗೆ ಅನುಮತಿ ಕೋರಿ ಸಲ್ಲಿಸಿದ ಅರ್ಜಿಯನ್ನೂ ಸಹ ಒಳಗೊಂಡಂತೆ ಇತರೆ ಅರ್ಜಿಗಳನ್ನೂ ಸಹ ವಿಚಾರಣೆಗೆ ತೆಗೆದುಕೊಳ್ಳಲಾಗುತ್ತದೆ ಎನ್ನುವುದು ಸರಿ. ಪುರಸಭೆಗೆ ಸಂಬಂಧಪಟ್ಟಂತಹ ವಿಚಾರಗಳು ಪುರಸಭೆಗೆ ಮತ್ತು ಗ್ರಾಮಕ್ಕೆ ಸಂಬಂಧಪಟ್ಟಂತಹ ವಿಚಾರಗಳು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುತ್ತವೆ ಎನ್ನುವುದು ಸರಿ.

3. ಕಟ್ಟಡ ಕಟ್ಟಲು ಅನುಮತಿ ನೀಡುವ ಮೊದಲು ಆ ಆಸ್ತಿಗೆ ಸಂಬಂಧಿಸಿದ ದಾಖಲೆಗಳು, ಅದಕ್ಕೆ ಸಂಬಂಧಿಸಿದಂತೆ ಕಂದಾಯ ಕಟ್ಟಲಾಗಿದೆಯೋ ಇಲ್ಲವೋ, ಅದರ ಅಭಿವೃದ್ಧಿ ಶುಲ್ಕ ಇವುಗಳ ಬಗ್ಗೆ ಪರಿಶೀಲಿಸಿ ನಂತರ ಅನುಮತಿ ನೀಡಲಾಗುತ್ತದೆ ಎನ್ನುವುದು ಸರಿ.

4. ಕಟ್ಟಡ ಕಟ್ಟಲು ಅನುಮತಿ ರದ್ದು ಮಾಡಿದ ಬಗ್ಗೆ ಠರಾವು ಆಗಿರುವುದಿಲ್ಲ. ವಿವಾದಿತ ಆಸ್ತಿ ಸಂಖ್ಯೆ 643 ಬಾಬನ್ನವರ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು ಅದನ್ನು ಅವರುಗಳು ವಿಭಾಗ ಮಾಡಿಕೊಂಡಿದ್ದಾರೆ. ಅವುಗಳಿಗೆ ಬೇರೆ ಬೇರೆ ನಂಬರ ನೀಡಲಾಗಿದೆ ಎನ್ನುವುದು ಸರಿ. ಈ ಪ್ರಕರಣದಲ್ಲಿ ಪೋಲಿಸರ ಮುಂದೆ ನಾನು ಹೇಳಿಕೆ ನೀಡಿದ್ದೇನೆ. ಗ್ರಾಮಠಾಣಾ ಏರಿಯಾ ಅಂದರೆ ಏನು ಎಂದು ನಿಮಗೆ ಗೊತ್ತಿದಿಯೇ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಉತ್ತರಿಸಿ ಮುಂದುವರೆದು ಸರ್ಕಾರಕ್ಕೆ ಸೇರಿದ ಜಾಗ ಎಂದು ಆ ಬಗ್ಗೆ ತಹಶೀಲ್ದಾರವರು ಸರ್ವೇ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಪೋಲಿಸರಿಗೆ ಹೇಳಿಕೆ ನೀಡುವ ಮೊದಲೇ ತಹಶೀಲ್ದಾರವರು ಸರ್ವೇ ಮಾಡಿದ್ದರು. ತಹಶೀಲ್ದಾರವರು ಸರ್ವೇ ಮಾಡಿರುವ ಬಗ್ಗೆ ನೀವು ದಾಖಲೆಗಳನ್ನು ನೋಡಿದ್ದೀರಾ ಎನ್ನುವುದಕ್ಕೆ ಸಾಕ್ಷಿ ನಾನು ನೋಡಿಲ್ಲ ಆದರೆ ಜನಗಳಿಂದ ಕೇಳಿ ತಿಳಿದುಕೊಂಡಿದ್ದೇನೆ ಎಂದು ಹೇಳಿದ್ದಾರೆ.

5. ವಿವಾದಿತ ಆಸ್ತಿ ಸಂಖ್ಯೆ 643 ಬಾಬನ್ನವರ ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ಮಾದರ ಸಮಾಜದವರು ಸಮುದಾಯ ಭವನ ಕಟ್ಟಲು ತಮಗೆ ಬೇಕು ಎಂದು ತಕರಾರು ಮಾಡುತ್ತಿದ್ದಾರೆ ಎನ್ನುವುದು ಸರಿ. ನಾನು ವಿವಾದಿತ ಸ್ಥಳಕ್ಕೆ ಭೇಟಿ ನೀಡಿದ್ದೇನು ಎನ್ನುವುದು ಸರಿ. ಆ ಸ್ಥಳದಲ್ಲಿ ಕಟ್ಟಡದ ಕಾಮಗಾರಿಯನ್ನು ಆರೋಪಿತರು [ಬಾಬನ್ನವರ ಕುಟುಂಬದವರು] ಮಾಡಿದ್ದರು ಎನ್ನುವುದು ಸರಿ.

6. ಚಿದಾನಂದ ಐಹೊಳೆ ಎನ್ನುವವರು ನಮ್ಮೂರಿನ ದಲಿತ ಸಂಘಟನೆಯ ಮುಖಂಡರು ಎನ್ನುವುದು ನನಗೆ ಗೊತ್ತಿಲ್ಲ, ಆದರೆ ಪತ್ರಕರ್ತರಾಗಿದ್ದಾರೆ ಎನ್ನುವುದು ಗೊತ್ತು.

**ಪಾಟೀ ಸವಾಲು 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.